**ಕರ್ನಾಟಕ ರಕ್ಷಣಾ ವೇದಿಕೆ**

ಓ ನಾಡ ಕನ್ನಡಿಗಾ,
ತಮಿಳುನಾಡು ಈ ದಿನ ಕನ್ನಡಿಗರ ನೆಲ ಜಲ ಕಬಳಿಸಿ ಜಾರಿಗೊಳಿಸಲು ರೂಪಿಸಿದ್ದ ಹೊಗೆನಕಲ್ ಯೋಜನೆಯನ್ನು ಮುಂದೂಡಿದೆ. ಇದು ಕನ್ನಡಿಗರು ಬೀಸುವ ದೊಣ್ಣೆಯಿಂದ ಪಾರಾದ ಹಾಗಾಗಿದೆ. ಆದರೆ ಮುಂದಿರುವುದು ನಿಜಕ್ಕೂ ಸವಾಲಿನ ದಿನಗಳು. ನೆರೆಯ ತಮಿಳುನಾಡು ನಮ್ಮ ನೆಲ ಜಲಗಳನ್ನು ನಮ್ಮ ಅನ್ನದ ತಟ್ಟೆಯಿಂದ ರೊಟ್ಟಿ ಕಸಿದಂತೆ ಕಸಿಯಲು ಮುಂದಾಗಿದೆ. ಇಂದು ನಾವು ನಮ್ಮ ಎಲ್ಲ ಶಕ್ತಿಯನ್ನು ಒಗ್ಗೂಡಿಸಿ ತಮಿಳುನಾಡನ್ನು ಹಿಮ್ಮೆಟ್ಟಿಸಬೇಕಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಇಂಥಾ ಘೋರ ಅನ್ಯಾಯಗಳು ಕನ್ನಡಿಗರ ಮೇಲೆ ನಡೆಯುತ್ತಿರುವುದನ್ನು ಸೆಟೆದು ನಿಂತು ನಿವಾರಿಸಬೇಕಿದೆ. ಕರ್ನಾಟಕ ರಕ್ಷಣಾ ವೇದಿಕೆಯು ಇಂಥಾ ದುರಾಕ್ರಮಗಳನ್ನು ಎಂದೆಂದಿಗೂ ಸಹಿಸದು. ಪ್ರಾಣವನ್ನಾದರೂ ಕೊಟ್ಟೇವು. ನಾಡಿಗೆ ಅನ್ಯಾಯ ಆಗುವುದನ್ನು ಎಂದಿಗೂ ಸಹಿಸೆವು. ಇದೀಗ ಆಗಿರುವ ಬೆಳವಣಿಗೆಗಳು ತಾತ್ಕಾಲಿಕವಾಗಿ ನೆಮ್ಮದಿ ನೀಡಿದ್ದರೂ ಮುಂದಿನ ದಿನಗಳಲ್ಲಿ ಮರುಕಳಿಸುವುದನ್ನು ನಾವು ತಡೆಯಬೇಕಾಗಿದೆ.

**ಈ ಯೋಜನೆಗೆ ನಮ್ಮ ವಿರೋಧವೇಕೆ?**

ಮೊದಲಿಗೆ ಕಾವೇರಿ ನದಿ ನೀರು ಹಂಚಿಕೆಯ ತೀರ್ಪನ್ನು ಕರ್ನಾಟಕ ಒಪ್ಪಿಲ್ಲ ಮತ್ತು ಸರ್ವೋಚ್ಛ ನ್ಯಾಯಾಲಯದಲ್ಲಿ ಕಾವೇರಿ ನ್ಯಾಯಮಂಡಲಿಯ ತೀರ್ಪನ್ನು ಪ್ರಶ್ನಿಸಲಾಗಿದೆ. ಇಂಥಾ ಸನ್ನಿವೇಶದಲ್ಲಿ ತಮಿಳುನಾಡು ಹೊಗೆನಕಲ್ ಯೋಜನೆಯನ್ನು ಜಾರಿಗೆ ತರಲು ಮುಂದಾಗಿರುವುದನ್ನು ನಾವು ವಿರೋಧಿಸುತ್ತೇವೆ.
ಹೊಗೆನಕಲ್ ನಡುಗಡ್ಡೆ ಕರ್ನಾಟಕ ರಾಜ್ಯದ ನೆಲವಾಗಿದ್ದು ಅದನ್ನು ತಮಿಳುನಾಡು ಅತಿಕ್ರಮಿಸಿರುವುದನ್ನು ಗಮನಿಸಿ ಜಂಟಿಯಾಗಿ ಗಡಿಯನ್ನು ಅಳೆಯಲು ಮುಂದಾಗಿ, ೨೦೦೪ರಲ್ಲಿ ಅಳತೆ ಕಾರ್ಯವನ್ನೂ ಆರಂಭಿಸಲಾಯಿತು. ಆದರೆ ತಮಿಳುನಾಡು ತನ್ನ ಪಾಪ ಬಯಲಾಗುವ ಭೀತಿಯಿಂದ ಈ ಜಂಟಿ ಸಮೀಕ್ಷೆಗೆ ಅಂದೇ ತಿಲಾಂಜಲಿ ನೀಡಿದ್ದಲ್ಲದೆ, ಇಂದಿನವರೆಗೂ ಒಂದೂ ಸಭೆಗೆ ಹಾಜರಾಗದೆ ಇದೀಗ ಇಡೀ ನಡುಗಡ್ಡೆ ತನ್ನದೆನ್ನುವಂತೆ ಅಲ್ಲಿ ಕಾಮಗಾರಿ ಆರಂಭಿಸಲು ಮುಂದಾಗಿದೆ. ಇದನ್ನು ಹೇಗೆ ತಾನೆ ಸಹಿಸಲಾಗುವುದು?
ಕರ್ನಾಟಕದಲ್ಲಿ ಚುನಾಯಿತ ಸರ್ಕಾರವಿಲ್ಲದ ಸಮಯದಲ್ಲಿ, ದೆಹಲಿಯಲ್ಲಿ ತಮ್ಮ ಸಹಭಾಗಿತ್ವದ ಸರ್ಕಾರವಿರುವಾಗ ಇಂಥಾ ಯೋಜನೆಗೆ ಎಲ್ಲ ನಿಯಮಗಳನ್ನೂ ಮೀರಿ ಮುಂದಾಗಿರುವ ತಮಿಳುನಾಡಿನ ಕುತಂತ್ರಕ್ಕೆ ತಕ್ಕ ಉತ್ತರ ನೀಡುತ್ತೇವೆ.

ಇಲ್ಲಿ ತಮಿಳು ಚಿತ್ರಗಳ ಪ್ರದರ್ಶನಕ್ಕೆ ತಡೆ, ಕೇಬಲ್‌ಗಳ ನಿಷೇಧ, ಬಸ್ಸು, ರೈಲು, ರಸ್ತೆ ತಡೆಗಳನ್ನು ತಪ್ಪು ಎಂದು ಬಿಂಬಿಸುವವರು ಇಂಥಾ ಸ್ಥಿತಿಗೆ ಕಾರಣವೇನೆಂದು ಯೋಚಿಸುವುದು ಉಚಿತ. ಕನ್ನಡ ನಾಡಿನಲ್ಲಿ ತಮಿಳು ವಾಹಿನಿಗಳು, ತಮಿಳು ಪತ್ರಿಕೆಗಳು ತಪ್ಪು ಮಾಹಿತಿ ಹರಡುತ್ತಿರುವುದನ್ನು ಅದು ಹೇಗೆ ಸಹಿಸಲಾದೀತು? ಅದಲ್ಲದೆ ಒಂದು ತಿಂಗಳಿನಿಂದ ಶಾಂತವಾಗಿಯೇ ನಡೆಯುತ್ತಿದ್ದ ನಿರಶನ, ಪ್ರತಿಭಟನೆಗಳು ತೀವ್ರವಾಗಲು ಕಾರಣವಾದರೂ ಏನು? ಕನ್ನಡಿಗರನ್ನು ಕೆರಳಿಸುವ ಹೇಳಿಕೆಗಳನ್ನು ನೀಡುತ್ತಿರುವ ಒಂದು ರಾಜ್ಯದ ಮುಖ್ಯಮಂತ್ರಿಯೂ ಆಗಿರುವ ತಮಿಳುನಾಡಿನ ಕರುಣಾನಿಧಿಯವರ ಬೇಜವಾಬ್ದಾರಿಯುತ ಮಾತುಗಳಲ್ಲವೇ. ತಮಿಳುನಾಡಿನ ಮುಖ್ಯಮಂತ್ರಿಗಳ ಇಂತಹಾ ಉದ್ಧಟತನಕ್ಕೆ ಕರ್ನಾಟಕ ರಕ್ಷಣಾ ವೇದಿಕೆಯು ತಕ್ಕ ಉತ್ತರವನ್ನು ನೀಡಲಿದೆ. ತಮಿಳುನಾಡಿನಲ್ಲಿ ವಾಸಿಸುತ್ತಿರುವ ಕನ್ನಡಿಗರ ಮೇಲೆ ಇದೀಗ ಹಲ್ಲೆಗೆ ಕೂಡಾ ಮುಂದಾಗಿರುವುದನ್ನು ಸಹಿಸುವುದಾದರೂ ಹೇಗೆ?
ಇದು ಬರಗಾಲ ಪೀಡಿತ ಪ್ರದೇಶದ ಬಡಜನರ ಕುಡಿಯುವ ನೀರಿನ ಯೋಜನೆ, ಇದನ್ನು ವಿರೋಧಿಸುತ್ತಿರುವ ಕನ್ನಡಿಗರು ಕ್ರೂರಿಗಳು ಎನ್ನುತ್ತಿರುವ ತಮಿಳುನಾಡು ಕಾವೇರಿ ಕಣಿವೆಯಲ್ಲಿ ತಮಿಳುನಾಡಿನ ದುಪ್ಪಟ್ಟು

**ಕರ್ನಾಟಕ ರಕ್ಷಣಾ ವೇದಿಕೆ**

ಬರಗಾಲಪೀಡಿತ ಪ್ರದೇಶ, ಬಡಜನತೆ ಇಲ್ಲಿರುವುದನ್ನು ಮರೆಯಿತೇಕೆ? ಸದಾಕಾಲವೂ ಕರ್ನಾಟಕ ಕೈಗೆತ್ತಿಕೊಳ್ಳಲು ಮುಂದಾದ ಪ್ರತಿ ಯೋಜನೆಯ ಜಾರಿಗೂ ತಡೆ ಮಾಡಿಲ್ಲವೇ? ಕಾವೇರಿ ನದಿ ಇರಲಿ, ಕಾವೇರಿ ಕಣಿವೆ ಪ್ರದೇಶದ ಕೆರೆಗಳ ಹೂಳನ್ನೆತ್ತಲೂ ತಡೆ ಮಾಡಿಲ್ಲವೇ? ಬೆಂಗಳೂರಿನ ಕುಡಿವ ನೀರು ಯೋಜನೆಗೆ ಹಣಕಾಸು ನೆರವು ನೀಡಲು ಮುಂದಾಗಿದ್ದ ಜಪಾನ್ ದೇಶವನ್ನು ಯೋಜನೆಯಿಂದ ಹಿಂದೆ ಸರಿಯುವಂತೆ ಒತ್ತಾಯಿಸಿದ್ದು ನೆನಪಿಲ್ಲವೇ? ಇವರಿಗಿಲ್ಲದ ಮಾನವೀಯತೆ ನಮ್ಮಿಂದ ಯಾಕೆ ನಿರೀಕ್ಷಿಸುತ್ತಿದ್ದಾರೆ?

ಇಷ್ಟಕ್ಕೂ ಗಡಿ, ನದಿ ನೀರು ಹಂಚಿಕೆ ಸಮಸ್ಯೆಗಳು ಇತ್ಯರ್ಥವಾದ ಮೇಲೆ ತಮ್ಮ ಪಾಲಿನ ನೀರನ್ನು ಬಳಸಿ ತಮ್ಮ ನೆಲದಲ್ಲಿ ಯೋಜನೆ ಜಾರಿಗೆ ತಂದುಕೊಂಡರೆ, ನಮ್ಮದೇನೂ ತಕರಾರಿಲ್ಲ. ಕನ್ನಡಿಗರ ಮೇಲೆ ಹಲ್ಲೆಯಂತಹ ಕೃತ್ಯಗಳಿಗೆ ತಮಿಳುನಾಡು ಮುಂದಾಗಿರುವಾಗ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ನಮಗೆ ನ್ಯಾಯ ಒದಗಿಸಿಕೊಡಬೇಕು. ನಮ್ಮ ಸಂಸದರು ಈ ನಿಟ್ಟಿನಲ್ಲಿ ಮುಂದಾಗಬೇಕು. ಅಲ್ಲದಿದ್ದರೆ ಕನ್ನಡಿಗರ ಆಕ್ರೋಶ ಮುಗಿಲುಮುಟ್ಟೀತು. ಅಂತಹ ಪರಿಸ್ಥಿತಿ ನಿರ್ಮಾಣವಾದರೆ ಅದರ ಹೊಣೆಯನ್ನು ಸರ್ಕಾರ ಹೊರಬೇಕಾದೀತು.
ಹೇ ಕನ್ನಡಿಗರೇ, ಬನ್ನಿ ಒಂದಾಗಿ, ನಮ್ಮೊಡನೆ ಕೈಜೋಡಿಸಿ, ಇಂದೂ ನಾವು ಮೈ ಮರೆತರೆ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಮನ್ನಿಸುವುದಿಲ್ಲ. ಇಂದು ತಮಿಳುನಾಡು ಈ ಯೋಜನೆಯನ್ನು ತಡೆಹಿಡಿಯಲು ಕರ್ನಾಟಕ ರಕ್ಷಣಾ ವೇದಿಕೆಯ ನಿಷ್ಟಾವಂತ ಕಾರ್ಯಕರ್ತರ ದಿಟ್ಟ ಹೋರಾಟವೇ ಕಾರಣವೆನ್ನಲು ಹೆಮ್ಮೆಯಾಗುತ್ತದೆ. ಇದು ನಾಡು ನುಡಿಗಳಿಗಾಗಿ ಹೋರಾಡುವ ನಮ್ಮ ಸ್ಥೈರ್ಯವನ್ನು ದುಪ್ಪಟ್ಟುಗೊಳಿಸಿದೆ.

ಸಿರಿಗನ್ನಡಂ ಗೆಲ್ಗೆ; ಸಿರಿಗನ್ನಡಂ ಬಾಳ್ಗೆ
ಟಿ ಏ ನಾರಾಯಣ ಗೌಡ – ರಾಜ್ಯಾಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ